**C.C 66/2013 CW 56, PW 31 ದಿನಾಂಕಃ 23-06-2026**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮಧ್ಯಂತರ ಆದೇಶದ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ**

ಚಾಸಾ 55 ರವರು ಮೃತಪಟ್ಟಿರುತ್ತಾರೆ. ಚಾಸಾ 55 ರವರು ಈ ಪ್ರಕರಣದಲ್ಲಿ ಡಿ.ವೈ.ಎಸ್.ಪಿ ಕಛೇರಿಯಿಂದ ಬಂದ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತಾರೆ. ಎಫ್ ಎಸ್ ಎಲ್ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 384 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ಚಾಸಾ 2 ರಿಂದ 6 , ಚಾಸಾ 23 ರಿಂದ 49 ರವರಿಗೆ ಹೇಳಿಕೆ ನೀಡಲು ಹಾಜರಾಗುವಂತೆ ನೋಟೀಸು ನೀಡಿರುವುದಿಲ್ಲ, ಮೌಖಿಕವಾಗಿ ತಿಳಿಸಿರುತ್ತೇನೆ. ಸದರಿ ಸಾಕ್ಷಿದಾರರು ಬೇರೆ ಬೇರೆ ದಿನಾಂಕದಂದು ಹಾಜರಾಗಿರುತ್ತಾರೆ. ಚಾಸಾ 2 ರಿಂದ 6 ರವರು ಮತ್ತು ಚಾಸಾ 23 ರಿಂದ 49 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಮತ್ತು ಮುದ್ದೆಮಾಲುಗಳನ್ನು ಪರಿಶೀಲನೆ ಮಾಡುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಎಲ್ಲಾ ಮುದ್ದೆ ಮಾಲುಗಳನ್ನು ಮೊಹರು ಮಾಡಿ, ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಹಿ ಇರುವ ಚೀಟಿಯನ್ನು ಮುದ್ದೆಮಾಲಿಗೆ ಅಂಟಿಸದೇ ಇದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದೆ ಮಾಲುಗಳಿಗೆ ಪ್ರತ್ಯೇಕ ಸಂಖ್ಯೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ

ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಮತ್ತು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕಾರ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ